Akashvani : Bangalore
National Bulletin In Kannada
07.08.2024 / 9.05 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<><*<><>*><>

<u>ಮುಖ್ಯಾಂಶಗಳು</u>

<><*<><>*><>

೧. ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ನ್ಯೂಜಿಲೆಂಡ್‌ಗೆ ಭೇಟಿ; ದ್ವಿಪಕ್ಷೀಯ ಮಾತುಕತೆಯಲ್ಲಿ ಭಾಗಿ

೨. ಇಂದು ರಾಷ್ಟ್ರೀಯ ಕೈಮಗ್ಗ ದಿನ; ನೇಕಾರರಿಗೆ ಸಂತ ಕಬೀರ್- ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿ ಪ್ರದಾನ ಮಾಡಲಿರುವ ಉಪರಾಷ್ಟ್ರಪತಿ

೩. ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಮೊಹಮ್ಮದ್ ಯೂನಸ್ ನೇಮಕ

೪. ಪ್ಯಾರಿಸ್ ಒಲಿಂಪಿಕ್ಸ್; ಮಹಿಳಾ ಕುಸ್ತಿ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ ವಿನೇಶ್ ಫೋಗಟ್

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ೩ ದಿನಗಳ ಪ್ರವಾಸಕ್ಕಾಗಿ ಇಂದು ನ್ಯೂಜಿಲೆಂಡ್‌ಗೆ ತೆರಳಿದ್ದಾರೆ. ನ್ಯೂಜಿಲೆಂಡ್‌ನ ಗವರ್ನರ್ ಜನರಲ್ ಡೇಮ್ ಸಿಂಡಿ ಕಿರೊ ಅವರ ಆಹ್ವಾನದ ಮೇರೆಗೆ ಅವರು ನ್ಯೂಜಿಲೆಂಡ್‌ಗೆ ಭೇಟಿ ನೀಡುತ್ತಿದ್ದಾರೆ. ಭೇಟಿಯ ಸಂದರ್ಭದಲ್ಲಿ ಅವರು, ಗವರ್ನರ್ ಜನರಲ್ ಕಿರೊ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ ಮತ್ತು ಪ್ರಧಾನಿ ಕ್ರಿಸ್ಟೋಫರ್ ಲುಕ್ಸನ್ ಅವರನ್ನು ಭೇಟಿಯಾಗಲಿದ್ದಾರೆ. ರಾಷ್ಟ್ರಪತಿ ಅವರು, ಶಿಕ್ಷಣ ಸಮ್ಮೇಳನವನ್ನು ಉದ್ದೇಶಿಸಿ ಭಾರತೀಯ ಸಮುದಾಯ ಮತ್ತು ಭಾರತದ ಸ್ನೇಹಿತರೊಂದಿಗೆ ಸಂವಾದ ನಡೆಸಲಿದ್ದಾರೆ.

<><*<><>*><>

ರಾಷ್ಟ್ರಪತಿ ಭವನದಲ್ಲಿರುವ ಅಮೃತ್ ಉದ್ಯಾನ್ ಬೇಸಿಗೆ ವಾರ್ಷಿಕ ಆವೃತ್ತಿ ೨೦೨೪ ರ ಉದ್ಘಾಟನೆಯನ್ನು ಇದೇ ೧೪ ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನೆರವೇರಿಸಲಿದ್ದಾರೆ. ಈ ಉದ್ಯಾನದ ವೀಕ್ಷಣೆಗೆ ಈ ತಿಂಗಳ ೧೬ ರಿಂದ ಮುಂದಿನ ತಿಂಗಳ ೧೫ ರವರೆಗೆ ಸಾರ್ವಜನಿಕರಿಗೆ ಅವಕಾಶವಿರಲಿದೆ. ಮೊದಲ ಬಾರಿಗೆ, ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸಲು ಆಗಸ್ಟ್ ೨೯ ಅನ್ನು ಕ್ರೀಡಾ ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ಮೀಸಲಿಡಲಾಗಿದೆ. ರಾಷ್ಟ್ರಪತಿ ಭವನದ ಗೇಟ್ ಸಂಖ್ಯೆ ೩೫ ರಿಂದ ಸಾರ್ವಜನಿಕರಿಗೆ ಪ್ರವೇಶವಿರುತ್ತದೆ. ರಾಷ್ಟ್ರಪತಿ ಭವನದ ವೆಬ್‌ಸೈಟ್‌ನಲ್ಲಿ ಮತ್ತು ವಾಕ್-ಇನ್ ವಿಸಿಟರ್‌ಗಳಿಗಾಗಿ ಸ್ವಯಂ ಸೇವಾ ಕಿಯೋಸ್ಕ್‌ಗಳ ಮೂಲಕ ಆನ್‌ಲೈನ್‌ನಲ್ಲಿ ಬುಕಿಂಗ್ ಮಾಡಬಹುದು.

<><*<><>*><>

ಇಂದು ನವದೆಹಲಿಯಲ್ಲಿ ೧೦ ನೇ ರಾಷ್ಟ್ರೀಯ ಕೈಮಗ್ಗ ದಿನವನ್ನು ಆಚರಿಸಲಾಗುತ್ತದೆ. ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು, ಕೈಮಗ್ಗ ಕ್ಷೇತ್ರದಲ್ಲಿ ಅತ್ಯುತ್ತಮ ಕೊಡುಗೆ ನೀಡಿರುವ ಕೈಮಗ್ಗ ನೇಕಾರರಿಗೆ ಸಂತ ಕಬೀರ್ ಪ್ರಶಸ್ತಿಗಳು ಮತ್ತು ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್, ಕೈಗಾರಿಕಾ ಪ್ರತಿನಿಧಿಗಳು, ರಫ್ತುದಾರರು, ವಿನ್ಯಾಸಕರು ಮತ್ತು ದೇಶಾದ್ಯಂತ ಒಂದು ಸಾವಿರಕ್ಕೂ ಹೆಚ್ಚು ನೇಕಾರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಕೈಮಗ್ಗ ಕ್ಷೇತ್ರದ ಪ್ರಾಮುಖ್ಯತೆ ಮತ್ತು ದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಅದರ ಕೊಡುಗೆಯ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಲಾಗಿದೆ.

<><*<><>*><>

ಇಂದು ನವದೆಹಲಿಯಲ್ಲಿ ೧೦ ನೇ ರಾಷ್ಟ್ರೀಯ ಕೈಮಗ್ಗ ದಿನವನ್ನು ಆಚರಿಸಲಾಗುತ್ತದೆ. ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು, ಕೈಮಗ್ಗ ಕ್ಷೇತ್ರದಲ್ಲಿ ಅತ್ಯುತ್ತಮ ಕೊಡುಗೆ ನೀಡಿರುವ ಕೈಮಗ್ಗ ನೇಕಾರರಿಗೆ ಸಂತ ಕಬೀರ್ ಪ್ರಶಸ್ತಿಗಳು ಮತ್ತು ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್, ಕೈಗಾರಿಕಾ ಪ್ರತಿನಿಧಿಗಳು, ರಫ್ತುದಾರರು, ವಿನ್ಯಾಸಕರು ಮತ್ತು ದೇಶಾದ್ಯಂತ ಒಂದು ಸಾವಿರಕ್ಕೂ ಹೆಚ್ಚು ನೇಕಾರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಕೈಮಗ್ಗ ಕ್ಷೇತ್ರದ ಪ್ರಾಮುಖ್ಯತೆ ಮತ್ತು ದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಅದರ ಕೊಡುಗೆಯ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಲಾಗಿದೆ.

<><*<><>*><>

ಸಚಿವ ಸಂಪುಟದ ಎಸಿಸಿ ನೇಮಕಾತಿ ಸಮಿತಿಯು ಚಲ್ಲಾ ಶ್ರೀನಿವಾಸುಲು ಸೆಟ್ಟಿ ಅವರನ್ನು ಎಸ್‌ಬಿಐ ಅಧ್ಯಕ್ಷರಾಗಿ ಮೂರು ವರ್ಷಗಳ ಅವಧಿಗೆ ನೇಮಕ ಮಾಡುವ ಮೂಲಕ ಹಣಕಾಸು ಸೇವೆಗಳ ಇಲಾಖೆಯ ಪ್ರಸ್ತಾವನೆಯನ್ನು ಅನುಮೋದಿಸಿದೆ ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

<><*<><>*><>

ಶಿಮ್ಲಾದಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ೧೦ ನೇ ಆವೃತ್ತಿಯು ಆಗಸ್ಟ್ ೧೬ ರಿಂದ ೧೮ ರವರೆಗೆ ಅಲ್ಲಿಯ ಐತಿಹಾಸಿಕ ಗೈಟಿ ಥಿಯೇಟರ್‌ನಲ್ಲಿ ನಡೆಯಲಿದೆ. ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಮತ್ತು ರಾಜ್ಯ ಭಾಷೆ ಹಾಗೂ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 'ಹಿಮಾಲಯನ್ ವೆಲಾಸಿಟಿ' ಈ ಉತ್ಸವವನ್ನು ಆಯೋಜಿಸುತ್ತಿದೆ. ಉತ್ಸವದ ನಿರ್ದೇಶಕ ಪುಷ್ಪ್ ರಾಜ್ ಠಾಕೂರ್ ಮಾತನಾಡಿ, ಈ ವರ್ಷ ಸೀಮಾ ಬಿಸ್ವಾಸ್ ಮುಖ್ಯ ಪಾತ್ರದಲ್ಲಿ ನಟಿಸಿರುವ 'ಮಿಸೆಸ್ ತೆಂಡೂಲ್ಕರ್' ಉದ್ಘಾಟನಾ ಚಿತ್ರವಾಗಲಿದೆ ಎಂದು ಹೇಳಿದರು. ಈ ವರ್ಷ, ೨೭ ದೇಶಗಳು ಮತ್ತು ೨೦ ರಾಜ್ಯಗಳು ಉತ್ಸವದಲ್ಲಿ ಭಾಗವಹಿಸುತ್ತಿವೆ, ಇದು ವೈವಿಧ್ಯಮಯ ಸಂಸ್ಕೃತಿಗಳು ಮತ್ತು ದೃಷ್ಟಿಕೋನಗಳ ಮೂಲಕ ಕಥೆ ಹೇಳುವ ಕಲೆಯನ್ನು ಆಚರಿಸಲು ಉತ್ತಮ ವೇದಿಕೆಯಾಗಿದೆ. ಅಂತರರಾಷ್ಟ್ರೀಯ ವಿಭಾಗದಲ್ಲಿ, ಫ್ರಾನ್ಸ್, ಇರಾನ್, ಶ್ರೀಲಂಕಾ, ಉರುಗ್ವೆ, ಜರ್ಮನಿ, ನೇಪಾಳ, ಗ್ರೀಸ್, ಯುಎಸ್, ಪೋರ್ಚುಗಲ್, ಸ್ವೀಡನ್, ಬಾಂಗ್ಲಾದೇಶ, ಸ್ವಿಟ್ಜರ್ಲೆಂಡ್, ಮಲೇಷ್ಯಾ, ಟುನೀಶಿಯಾ, ಆಫ್ರಿಕಾ, ಈಜಿಪ್ಟ್, ಇಟಲಿ, ಟರ್ಕಿ, ಉಕ್ರೇನ್, ಜೆಕ್ ರಿಪಬ್ಲಿಕ್ ಚಿತ್ರ ನಿರ್ಮಾಪಕರು ಕೊರಿಯಾ, ಕೆನಡಾ, ಬ್ರಿಟನ್, ಬಲ್ಗೇರಿಯಾ ಮತ್ತು ಚೀನಾ ಭಾಗವಹಿಸುತ್ತಿವೆ.

<><*<><>*><>

ಡಿಆರ್‌ಡಿಒ ವಿಜ್ಞಾನಿಗಳು ಪಿಬಿಎಟಿ ಆಧಾರಿತ ಜೈವಿಕ ವಿಘಟನೀಯ ಪ್ಯಾಕೇಜಿಂಗ್ ಅನ್ನು ಅಭಿವೃದ್ಧಿಪಡಿಸಿದ್ದಾರೆ. ಹೈದರಾಬಾದ್‌ನಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ-ಡಿಆರ್‌ಡಿಒ ವಿಜ್ಞಾನಿಗಳ ತಂಡವು ಪಿಬಿಎಟಿ ಆಧಾರಿತ ಜೈವಿಕ ವಿಘಟನೀಯ ಪ್ಯಾಕೇಜಿಂಗ್ ಅನ್ನು ಅಭಿವೃದ್ಧಿಪಡಿಸಿದೆ, ಇದು ಪರಿಸರ ಸ್ನೇಹಿ ಪರ್ಯಾಯಗಳೊಂದಿಗೆ ಮಾರುಕಟ್ಟೆಯಲ್ಲಿ ಕ್ರಾಂತಿಯನ್ನುಂಟುಮಾಡುತ್ತದೆ, ಮೂರು ತಿಂಗಳೊಳಗೆ ಕೊಳೆಯುತ್ತದೆ ಮತ್ತು ಯಾವುದೇ ಹಾನಿಕಾರಕ ಅಂಶವನ್ನು ಉಳಿಸುವುದಿಲ್ಲ. ಡಿಆರ್‌ಡಿಒ ವಿಜ್ಞಾನಿ ಡಾ. ಕೆ ವೀರಬ್ರಹ್ಮಮ್, ಮತ್ತು ಹೈದರಾಬಾದ್‌ನಲ್ಲಿರುವ ಡಿಆರ್‌ಡಿಒ ನ ಅಡ್ವಾನ್ಸ್ಡ್ ಸಿಸ್ಟಮ್ಸ್ ಲ್ಯಾಬೊರೇಟರಿಯಲ್ಲಿ ಅವರ ತಂಡವು ಪೆಟ್ರೋಲಿಯಂ ಉತ್ಪನ್ನಗಳು ಅಥವಾ ಸಸ್ಯ ತೈಲಗಳಿಂದ ಪಡೆದ ಜೈವಿಕ ವಿಘಟನೀಯ ಪಾಲಿಮರ್ ಪಿಬಿಎಟಿ ಅನ್ನು ಬಳಸಿಕೊಂಡು ಜೈವಿಕ ವಿಘಟನೀಯ ಪ್ಯಾಕೇಜಿಂಗ್ ಉತ್ಪನ್ನಗಳನ್ನು

ಅಭಿವೃದ್ಧಿಪಡಿಸಿದರು. ಈ ನವೀನ ತಂತ್ರಜ್ಞಾನವನ್ನು ೪೦ ಕ್ಕೂ ಹೆಚ್ಚು ಕೈಗಾರಿಕೆಗಳೊಂದಿಗೆ ಉಚಿತವಾಗಿ ಹಂಚಿಕೊಳ್ಳಲಾಗಿದೆ, ಇದು ದೇಶ ಮತ್ತು ಪ್ರಪಂಚದಾದ್ಯಂತ ವ್ಯಾಪಕವಾಗಿ ಅಳವಡಿಸಿಕೊಳ್ಳುವ ಗುರಿಯನ್ನು ಹೊಂದಿದೆ ಎಂದು ತಂಡವು ತಿಳಿಸಿದೆ. ಐಎಸ್ ೧೭೦೮೮ ಪರೀಕ್ಷೆಯನ್ನು ಒಳಗೊಂಡಂತೆ ವ್ಯಾಪಕವಾದ ಪರಿಸರ ಪ್ರಭಾವದ ಅಧ್ಯಯನಗಳನ್ನು ಇದು ಒಳಗೊಂಡಿದೆ. ತಿರುಮಲ ದೇವಸ್ಥಾನದಲ್ಲಿ ಈ ಉಪಕ್ರಮದ ಯಶಸ್ಸು ಈಗಾಗಲೇ ಸ್ಪಷ್ಟವಾಗಿದೆ ಎಂದು ಅವರು ಹೇಳಿದರು. ಜೈವಿಕ ವಿಘಟನೀಯ ವಸ್ತುಗಳನ್ನು ವೈದ್ಯಕೀಯ ತ್ಯಾಜ್ಯ ಚೀಲಗಳು, ಕಸದ ಚೀಲಗಳು, ನರ್ಸರಿ ಚೀಲಗಳು, ಪ್ಯಾಕಿಂಗ್ ಫಿಲ್ಮ್‌ಗಳಿಗೆ ಬಳಸಿಕೊಳ್ಳಬಹುದು, “ಈ ತಂತ್ರಜ್ಞಾನದ ಪೇಟೆಂಟ್ ಪ್ರಗತಿಯಲ್ಲಿದೆ.

<><*<><>*><>

ಬಾಂಗ್ಲಾದೇಶದ ರಾಷ್ಟ್ರಪತಿ ಮೊಹಮ್ಮದ್ ಶಹಾಬುದ್ದೀನ್ ಅವರು ನೊಬೆಲ್ ಪ್ರಶಸ್ತಿ ವಿಜೇತ ಮೊಹಮ್ಮದ್ ಯೂನಸ್ ಅವರನ್ನು ಮಧ್ಯಂತರ ಸರ್ಕಾರದ ಮುಖ್ಯಸ್ಥರನ್ನಾಗಿ ನೇಮಿಸಿದ್ದಾರೆ. ಅಧ್ಯಕ್ಷ ಶಹಾಬುದ್ದೀನ್ ಅವರು, ನಿನ್ನೆ ಢಾಕಾದ ಅಧ್ಯಕ್ಷೀಯ ಭವನವಾದ ಬಂಗಬಾಬನ್‌ನಲ್ಲಿ ಮೂರು ಸೇವೆಗಳ ಮುಖ್ಯಸ್ಥರು ಮತ್ತು ತಾರತಮ್ಯ ವಿರೋಧಿ ವಿದ್ಯಾರ್ಥಿ ಆಂದೋಲನದ ೧೩ ಸದಸ್ಯರ ನಿಯೋಗದೊಂದಿಗೆ ನಡೆಸಿದ ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ವಿವಿಧ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿದ ನಂತರ ಮಧ್ಯಂತರ ಸರ್ಕಾರದ ಇತರ ಸದಸ್ಯರನ್ನು ಅಂತಿಮಗೊಳಿಸಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು. ರಾಷ್ಟ್ರಪತಿಗಳು ಸಂಸತ್ತನ್ನೂ ವಿಸರ್ಜಿಸಿದ್ದಾರೆ. ಪ್ರತಿಭಟನೆಯ ನೇತೃತ್ವ ವಹಿಸಿದ್ದ ತಾರತಮ್ಯ ವಿರೋಧಿ ವಿದ್ಯಾರ್ಥಿ ಚಳವಳಿಯು ಈ ಹಿಂದೆ ೮೪ ವರ್ಷದ ಯೂನಸ್ ಮಧ್ಯಂತರ ಸರ್ಕಾರದ ನೇತೃತ್ವ ವಹಿಸಲು ಒಪ್ಪಿಕೊಂಡಿದ್ದಾರೆ ಎಂದು ಹೇಳಿದೆ.

<><*<><>*><>

ಭಾರತವು ತನ್ನ ರಾಜತಾಂತ್ರಿಕ ಕಾರ್ಯಾಚರಣೆಗಳ ಮೂಲಕ ಬಾಂಗ್ಲಾದೇಶದಲ್ಲಿರುವ ತನ್ನ ಪ್ರಜೆಗಳೊಂದಿಗೆ ನಿಕಟ ಮತ್ತು ನಿರಂತರ ಸಂಪರ್ಕದಲ್ಲಿದೆ. ಬಾಂಗ್ಲಾದೇಶದ ಪರಿಸ್ಥಿತಿಯ ಕುರಿತು ಸಂಸತ್ತಿನ ಉಭಯ ಸದನಗಳಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರವರು, ಸದ್ಯ ೯ ಸಾವಿರ ವಿದ್ಯಾರ್ಥಿಗಳು ಸೇರಿದಂತೆ ಸುಮಾರು ೧೯ ಸಾವಿರ ಭಾರತೀಯರು ಬಾಂಗ್ಲಾದೇಶದಲ್ಲಿದ್ದಾರೆ. ಢಾಕಾದಲ್ಲಿನ ಹೈಕಮಿಷನ್‌ನ ಸಲಹೆಯ ಮೇರೆಗೆ ಕಳೆದ ತಿಂಗಳು ಹೆಚ್ಚಿನ ವಿದ್ಯಾರ್ಥಿಗಳು ಈಗಾಗಲೇ ಭಾರತಕ್ಕೆ ಮರಳಿದ್ದಾರೆ ಎಂದು ಅವರು ಹೇಳಿದರು. ಸದ್ಯದ ಸಂಕೀರ್ಣ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ಗಡಿ ಕಾವಲು ಪಡೆಗಳಿಗೆ

ಎಚ್ಚರದಿಂದ ಇರುವಂತೆ ಸೂಚನೆ ನೀಡಲಾಗಿದೆ ಎಂದು ಅವರು ಹೇಳಿದರು. ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ದೆಹಲಿಗೆ ಆಗಮಿಸಿದ್ದಾರೆ ಎಂದು ಅವರು ಮಾಹಿತಿ ನೀಡಿದರು. ಕಳೆದ ೨೪ ಗಂಟೆಗಳಲ್ಲಿ, ಹೊಸ ದೆಹಲಿಯು ಢಾಕಾದಲ್ಲಿನ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಂಪರ್ಕದಲ್ಲಿದೆ. ಢಾಕಾದಲ್ಲಿನ ಹೈಕಮಿಷನ್ ಜೊತೆಗೆ ಚಿತ್ತಗಾಂಗ್, ರಾಜ್‌ಶಾಹಿ, ಖುಲ್ನಾ ಮತ್ತು ಸಿಲ್ಹೆಟ್‌ನಲ್ಲಿ ಸಹಾಯಕ ಹೈಕಮಿಷನ್‌ಗಳಿವೆ. ಬಾಂಗ್ಲಾ ಸರ್ಕಾರವು ಈ ಸಂಸ್ಥೆಗಳಿಗೆ ಅಗತ್ಯವಾದ ಭದ್ರತಾ ರಕ್ಷಣೆಯನ್ನು ನೀಡುತ್ತದೆ ಎಂದು ಭಾರತ ನಿರೀಕ್ಷಿಸುತ್ತದೆ ಮತ್ತು ಪರಿಸ್ಥಿತಿ ಸ್ಥಿರವಾದ ನಂತರ ಅವುಗಳ ಸಾಮಾನ್ಯ ಕಾರ್ಯನಿರ್ವಹಣೆಯನ್ನು ಎದುರು ನೋಡುತ್ತಿದೆ ಎಂದು ಅವರು ಹೇಳಿದರು.

<><*<><>*><>

ಅಥ್ಲೆಟಿಕ್ಸ್‌ನಲ್ಲಿ ಹರ್ಡಲರ್ ಜ್ಯೋತಿ ಯರ್ರಾಜಿ, ಎತ್ತರ ಜಿಗಿತ ಪಟು ಸರ್ವೇಶ್ ಅನಿಲ್ ಕುಶಾರೆ ಮತ್ತು ಟ್ರಿಪಲ್ ಜಂಪರ್‌ಗಳಾದ ಅಬ್ದುಲ್ಲಾ ನರಂಗೊಳಿಂತೇವಿಡ ಮತ್ತು ಪ್ರವೀಣ್ ಚಿತ್ರವೇಲ್ ಅವರನ್ನು ಮೊದಲ ಸುತ್ತಿನಲ್ಲಿ ಎದುರಿಸಲಿದ್ದಾರೆ. ಮತ್ತೊಂದೆಡೆ ಅಥ್ಲೆಟಿಕ್ಸ್‌ನಲ್ಲಿ ಪುರುಷರ ೩ ಸಾವಿರದ ಮೀಟರ್ ಸ್ಟೀಪಲ್‌ಚೇಸ್ ಫೈನಲ್‌ನಲ್ಲಿ ಅವಿನಾಶ್ ಸೇಬಲ್ ಪದಕಕ್ಕಾಗಿ ಸೆಣಸಲಿದ್ದಾರೆ. ಫೈನಲ್ ನಾಳೆ ನಡೆಯಲಿದೆ. ಮೀರಾಬಾಯಿ ಚಾನು ಅವರು, ಮಹಿಳೆಯರ ೪೯ ಕೆಜಿ ವೇಟ್‌ಲಿಫ್ಟಿಂಗ್‌ನಲ್ಲಿ ರಾತ್ರಿ ೧೧ ಗಂಟೆಗೆ ಭಾಗವಹಿಸಲಿದ್ದಾರೆ.  ನಿನ್ನೆ ನಡೆದ ಪ್ಯಾರಿಸ್ ಒಲಿಂಪಿಕ್ಸ್‌ನ ಸೆಮಿಫೈನಲ್‌ನಲ್ಲಿ ಭಾರತೀಯ ಪುರುಷರ ಹಾಕಿ ತಂಡ ಜರ್ಮನಿ ವಿರುದ್ಧ ೨-೩ ಅಂತರದಿಂದ ಸೋಲನುಭವಿಸಿದೆ.

<><*<><>*><>

ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ೧೧ ಕೋಟಿಗೂ ಹೆಚ್ಚು ಫಲಾನುಭವಿ ರೈತರಿಗೆ ಇದುವರೆಗೆ ೩.೨೪ ಲಕ್ಷ ಕೋಟಿ ರೂಪಾಯಿಗಳನ್ನು ವಿತರಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.  ಲೋಕಸಭೆಯಲ್ಲಿ ನಿನ್ನೆ ಈ ಕುರಿತು ಲಿಖಿತ ಉತ್ತರ ನೀಡಿದ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವ ರಾಮನಾಥ್ ಠಾಕೂರ್, ಇದುವರೆಗೆ ಅನುದಾನವನ್ನು ೧೭ ಕಂತುಗಳಲ್ಲಿ ಫಲಾನುಭವಿಗಳ ಖಾತೆಗಳಿಗೆ ನೇರ ವರ್ಗಾವಣೆ ಮಾಡಲಾಗಿದೆ. ಪಿಎಂ-ಕಿಸಾನ್ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ವರ್ಷಕ್ಕೆ ೬ ಸಾವಿರ ರೂಪಾಯಿಗಳನ್ನು ಮೂರು ಸಮಾನ ಕಂತುಗಳಲ್ಲಿ ವಿತರಿಸಲಾಗುತ್ತಿದೆ ಎಂದು ಹೇಳಿದರು.

<><*<><>*><>

ಕೊಲಂಬೊದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿಂದು ಭಾರತ ಮತ್ತು ಆತಿಥೇಯ ಶ್ರೀಲಂಕಾ ನಡುವಿನ ಮೂರನೇ ಹಾಗೂ ಅಂತಿಮ ಏಕದಿನ ಕ್ರಿಕೆಟ್ ಪಂದ್ಯ ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ ೨:೩೦ಕ್ಕೆ ಆರಂಭವಾಗಲಿದೆ.

<><*<><>*><>

ಕೇಳುಗರ ಗಮನಕ್ಕೆ...

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ಕ್ರೀಡಾಕೂಟದ ಪ್ರಸಾರದ ಹಿನ್ನೆಲೆಯಲ್ಲಿ ಬೆಳಗ್ಗೆ ೭-೩೫ಕ್ಕೆ ಪ್ರಸಾರವಾಗುತ್ತಿದ್ದ ರಾಷ್ಟ್ರೀಯ ವಾರ್ತೆಗಳು ಇದೇ ತಿಂಗಳ ೧೧ರವರೆಗೆ ಬೆಳಗ್ಗೆ ೯ ಗಂಟೆ ೫ ನಿಮಿಷಕ್ಕೆ ಪ್ರಸಾರವಾಗಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧.೧೦ ಕ್ಕೆ <>*><>